ಶ್ರೀ ಬಿ. ರಾಮಯ್ಯ.—ಪೆಡ್ಡೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಡೂಲ್ಡ್ ಟ್ರೈಬ್ಸ್ ಜನರು ಇರತಕ್ಕ ಜಾಗಗಳಲ್ಲಿ ಈ ಯೋಜನೆಗಳಂ ಯಾವತ್ತೇ ತೆಗೆದುಕೊಂಡಿದ್ದರೂ ಅಲ್ಲಿಗೆ ಮೊದಲಂ ನಲ್ಲಿಗಳನ್ನು ಹಾಕಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ನೀಡಿದ್ದೇನೆ. ಅವರು ಆ ಕೆಲಸವನ್ನು ಮಾಡಿಕೊಡುತ್ತಾರೆ.

Government Hospital in Thimmasandra Village, Channapatna Taluk.

884 SRI D. T. RAMU (Channapatna).—Will the Minister for Health and Family Welfare be pleased to state.—

(a) whether it is a fact that there is a Government Hospital in Thimmasandra Village of Channapatna Taluk;

(b) if so, whether there are Doctors in that Hospital;

(c) if not, whether the Government would post Doctors?

SRI A. K. ABDUL SAMAD.—Minister for Health and Family Welfare.

(a) No.

(b) Does not arise.

(c) Does not arise.

ಶ್ರೀ ಡಿ. ಟಿ ರಾಮು.—ಸ್ವಾಮಿ, ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ಒಂದು ಸರ್ಕಾರೀ ಆಸ್ಪತ್ರೆ ಇರುವುದು ನಿಜವೆ ? ಎಂದು ನಾನು ಕೇಳಿರುವ ಪ್ರಶ್ನೆಗೆ ತಾವು ಇಲ್ಲ. ಎಂದು ಉತ್ತರ ಕೊಟ್ಟಿದ್ದೀರಿ. ಈ ಉತ್ತರವನ್ನು ತಾವು ಜವಾಬ್ದಾರಿಯಿಂದ ಹೇಳುತ್ತಿದ್ದೀರಾ ?

MR. SPEAKER—It is supposed to be so.

ಶ್ರೀ ಡಿ. ಟಿ. ರಾಮು.—ರ್ಗಿಲೆನೇ ಇಸವಿಯಲ್ಲಿ ಕೆಂಗಲ್ ಹನುಮಂತಯ್ಯನವರು ಸ್ವತಃ ಬಂದು ಈ ಆಸ್ಪತ್ರೆಯನ್ನು ಉದ್ಘಾಟಿಸಿದ್ದಾರೆ. ಅಲ್ಲಿ ೨ ವರ್ಷಗಳಕಾಲ ವೈದ್ಯರು ಇದ್ದರು. ಆನಂತರ ವಾರಕ್ಕೆ ಎರಡುಸಾರಿ ವೈದ್ಯರು ಬಂದು ಹೋಗುತ್ತಿದ್ದರು. ಇದರ ಬಗ್ಗೆ ಸಾಕಷ್ಟು ವ್ಯವಹಾರ ನಡೆದಿದೆ. ಇಷ್ಟೆಲ್ಲಾ ಇದ್ದರೂ ತಾವು ಆ ಊರಿನಲ್ಲಿ ಆಸ್ಪತ್ರೆಯೇ ಇಲ್ಲವೆಂದು ಹೇಳುತ್ತಿರುವುದು ಸರಿಯೆ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ರ್ಗಿಲೆರಲ್ಲಿ ಕೆಂಗಲ್ ಹನುಮಂತಯ್ಯನವರೇ ಉದ್ಘಾಟನೆ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ. ಆದರೆ ಅಂಥಾದ್ದು ಯಾವುದೂ ನಮ್ಮ ರೆಕಾರ್ಡ್ಸ್‌ನಲ್ಲಿ ಇಲ್ಲ. ಅದಕ್ಕೆ ಸರ್ಕಾರೀ ಆದೇಶ ಕೂಡ ಹೊರಡಿಸಿಲ್ಲ. ಸಾಮಾನ್ಯವಾಗಿ ನಮ್ಮ ಇಲಾಖೆಯಿಂದ ಆಸ್ಪತ್ರೆಗಳನ್ನು ಮಂಜೂರು ಮಾಡಿದರೆ ಸರ್ಕಾರೀ ಆದೇಶವನ್ನು ಹೊರಡಿಸುತ್ತೇವೆ ಡ್ರಗ್ಸ್ ಎಷ್ಟು ಬೇಕೋ ಅಷ್ಟು ಕೊಡುತ್ತೇವೆ, ಈಗ ಅಲ್ಲಿ ಒಂದು ಬಿಲ್ಡಿಂಗ್ ಇದೆ, ಹಿಂದೆ ವಾರಕ್ಕೆ ಎರಡುಸಲ ವೈದ್ಯರು ಭೇಟಿ ಕೊಡುತ್ತಿದ್ದರೆಂದು ತಾವು ಹೇಳುತ್ತಿದ್ದೀರಿ. ವಾರಕ್ಕೆ ಒಂದು ಸಾರಿ ಮೆಡಿಕಲ್‌ಆಫೀಸರ್ ಹಾಗೂ ಲೇಡಿ ಡಾಕ್ಟರ್ ಭೇಟಿ ಕೊಡುವಂತೆ ಆಜ್ಞೆ ಮಾಡಿದ್ದೇವೆ. ಹಿಂದಿನ ವಿಧಾನ ಸಭಾ ಸದಸ್ಯರಾದ ಮಾದೇಗೌಡರು ಈ ಬಗ್ಗೆ ರೆಪ್ರೆಸೆಂಟ್ ಮಾಡಿದ್ದಾರೆ. ಅದನ್ನು I am seriously considering as to whether sanction could be accorded to open a Health Unit in future.

ಶ್ರೀ ಡಿ. ಟಿ. ರಾಮು.—ಈ ಬಿಲ್ಲಿಂಗ್ ಇರತಕ್ಕದ್ದು ನಮ್ಮ ಗಮನಕ್ಕೆ ಬಂದಿಲ್ಲವೆಂದೂ ಸರ್ಕಾರೀ ದಾಖಲೆಯಲ್ಲಿ ಇದರ ಹೆಸರೇ ಇಲ್ಲವೆಂದೂ ಹೇಳುತ್ತಿದ್ದೀರಿ. ಹಾಗಾದರೆ ಪ್ರತಿವರ್ಷವೂ ಲೋಕೋಪಯೋಗಿ ಇಲಾಖೆಯವರು ಈ ಕಟ್ಟಡವನ್ನು ಏತಕ್ಕೆ ರಿಪೇರಿ ಮಾಡುತ್ತಿದ್ದರು ?

ಶ್ರೀ ಎ.ಕೆ. ಅಬ್ದುಲ್ ಸಮದ್.—ಇದಕ್ಕೆ ನಾವು ಮಂಜೂರಾತಿಯನ್ನೂ ಕೊಟ್ಟಿಲ್ಲ, ಸರ್ಕಾರೀ ಆಜ್ಞೆ ಹೊರಡಿಸಿಲ್ಲ, ಅಲ್ಲದೆ ಇದರ ಬಗ್ಗೆ ಯಾವುದೇ ರೆಕಾರ್ಡ್ಸ್ ಕೂಡ ನಮ್ಮಲ್ಲಿಲ್ಲ. ನೀವು ಹೇಳಿರುವುದರಿಂದ ವೈದ್ಯರು ವಾರಕ್ಕೆ ಎರಡುಬಾರಿ ಆ ಆಸ್ಪತ್ರೆಗೆ ಭೇಟಿ ನೀಡುವಂತೆ ಆಜ್ಞೆ ಮಾಡಿದ್ದೇನೆ. ಮತ್ತು ಪ್ರಸಕ್ತ ಸಾಲಿನಲ್ಲೇ ಅಲ್ಲಿ ಒಂದು ಹೆಲ್ತ್ ಯೂನಿಟ್ ಕೂಡ ಸ್ಯಾಂಕ್ಷನ್ ಮಾಡುವುದಕ್ಕೆ ತೀವ್ರ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ರಾಮು.—ಅಲ್ಲಿ ಆಸ್ಪತ್ರೆ ಕಟ್ಟಡ ಇರುವುದರಿಂದ ಲೋಕೋಪಯೋಗಿ ಇಲಾಖೆಯವರು ಅದನ್ನು ರಿಪೇರಿ ಮಾಡುತ್ತಿರುವುದು.

ಅಧ್ಯಕ್ಷರು.—ಅದು ಸರ್ಕಾರೀ ದಾಖಲೆಯಲ್ಲಿ ಇಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಡಿ. ಟಿ. ರಾಮು.—ಹಿಂದೆಯೇ ಇದನ್ನು ಮಾಡಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೇಕಾದರೆ ಈ ರೆಕಾರ್ಡ್ಸನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಸರ್ಕಾರೀ ಆದೇಶ ಏನಿದೆ ಅದನ್ನು ಓದಿ ಹೇಳಿ.

ಶ್ರೀ ಡಿ. ಟಿ. ರಾಮು.—ವಾರಕ್ಕೆ ಎರಡುಸಾರಿ ವೈದ್ಯರು ಬಂದು ಜನರಿಗೆ ಚಿಕಿತ್ಸೆಮಾಡಿ ಹೋಗುವಂತೆ ಮಾಡಬೇಕೆಂದು ನಾವು ಮನವಿಯನ್ನು ಕೊಟ್ಟಮೇಲೆ ೧೯೮೧ ರಲ್ಲಿ ಡಾಕ್ಟರನ್ನು ನೇಮಕ ಮಾಡಿದರು. ಈ ಕಟ್ಟಡ ಬಹಳ ದೊಡ್ಡದಾಗಿರುವುದರಿಂದ ಅಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನೇ ಮಾಡಬಹುದು. ಮಾನ್ಯ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು, ಆಂದಿನ ಆರೋಗ್ಯ ಮಂತ್ರಿಗಳಾಗಿದ್ದ ಕೆ. ಪುಟ್ಟಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮುಖ್ಯ ಅತಿಥಿಯಾಗಿದ್ದರು. ಇಷ್ಟೆಲ್ಲಾ ಇರುವಾಗ ಅಲ್ಲಿ ಆಸ್ಪತ್ರೆಯ ಕಟ್ಟಡ ಇದೆಯೆಂಬುದೇ ತಮಗೆ ಗೊತ್ತಿಲ್ಲವೆಂದು ಹೇಳಿದರೆ ಅದಕ್ಕೆ ನಾವು ಏನು ಹೇಳಬೇಕು ?

ಅಧ್ಯಕ್ಷರು.—ಸರ್ಕಾರೀ ದಾಖಲೆಯಲ್ಲಿಲ್ಲವೆಂದು ಹೇಳುತ್ತಿದ್ದಾರೆಯೇ ಹೊರತು ನಮಗೆ ಗೊತ್ತಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಕೆಂಗಲ್‌ರವರನ್ನು ಹಾಗೆಯೇ ಕರೆದುಕೊಂಡುಹೋಗಿ ಉದ್ಘಾಟನೆ ಮಾಡಿಸಿದ್ದಾರೆ. ಆದರೆ ಸರ್ಕಾರೀ ದಾಖಲೆಯಲ್ಲಿಲ್ಲ. ಆದರೆ ಮಾನ್ಯ ಕೆಂಗಲ್ ಹನುಮಂತಯ್ಯನವರು ಅದನ್ನು ಉದ್ಘಾಟನೆ ಮಾಡಿದ್ದರೆಂದು ತಾವು ಹೇಳುತ್ತಿರುವುದರಿಂದ ಈ ವಿಚಾರವನ್ನು ನಾನು ತೀವ್ರವಾಗಿ ಪರಿಶೀಲಿಸುತ್ತೇನೆ.

ಶ್ರೀ ಡಿ. ಟಿ. ರಾಮು.—ಆದಷ್ಟುಬೇಗ ಅಲ್ಲಿಗೆ ವೈದ್ಯರನ್ನು ನೇಮಕ ಮಾಡುತ್ತೀರಾ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಈಗ ವಾರಕ್ಕೆ ಎರಡು ಸಾರಿ ವೈದ್ಯರು ಭೇಟಿ ನೀಡುವಂತೆ ಆಜ್ಞೆ ಮಾಡಿದ್ದೇನೆ. ತಾವು ಹೇಳುತ್ತಿರುವುದನ್ನು ತೀವ್ರವಾಗಿ ಪರಿಶೀಲಿಸುತ್ತೇನೆ.

Transfers of Employes working in the District Health and Family Welfare Offiee at Mangalore.

950. SRI K. RAMA BHAT (Puttur) Will the Minister for Health and Family Welfare be pleased to state :—

(a) the number of employees who are working in the Office of District Health and Family Welfare at Mangalore, without transfers even after rendering five years of service in that office;